# 3 ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಗಳ ನ್ಯಾಯಾಲಯ, ಬೆಂಗಳೂರು ನಗರ.

## ಸಿಸಿ. 10661/2016

ಚಾಸಾ- 7 ಪ್ರಾ ಸಾ-4

| | |
|---|---|
| **ಸಾಕ್ಷಿದಾರರ ಹೆಸರು** | ಪ್ರಕಾಶ್ |
| **ತಂದೆಯ/ ಗಂಡನ ಹೆಸರು** | ವೆಂಕಟರಮಣಪ್ಪ |
| **ವಯಸ್ಸು** | 35 ವರ್ಷ |
| **ಉದ್ಯೋಗ** | ಪ್ರಾಮಿಜನ್ ಸ್ಟೋರ್ |
| **ವಾಸ** | ಸಂಪಂಗಿರಾಮನಗರ , ಬೆಂಗಳೂರು. |
| **ಪ್ರಮಾಣೀಕರಿಸಿದ ದಿನಾಂಕ** | 14.02.2024. |

**ಮುಖ್ಯ ವಿಚಾರಣೆ : ಹಿ.ಸ ಸ. ಅಭಿಯೋಜಕರವರಿಂದ :**

ನಾನು ಸಂಪಂಗಿರಾಮನಗರದಲ್ಲಿ ಪ್ರಾಮಿಜನ್ ಸ್ಟೋರ್ ಹೊಂದಿರುತ್ತೇನೆ. ನಮ್ಮ ಅಂಗಡಿಗೆ ಹಿಂದೂಸ್ತಾನ್ ಯೂನಿ ಲೀವರ್ ಉತ್ಪನಗಳನ್ನು ಹಿಂದೂಸ್ತಾನ್ ಯೂನಿ ಲೀವರ್ ಲಿಮಿಟೆಡ್ ನ ಡೀಲರ್ ಆದ ವಿಶಾಖ ಮಾರ್ಕೆಟಿಂಗ್ ರವರು ಸರಬರಾಜು ಮಾಡುತ್ತಿದ್ದರು. ಅವರು ವಸ್ತುಗಳನ್ನು ತಂದು ಕೊಟ್ಟಾಗ ನಾವು ಅವರಿಗೆ ಹಣ ಕೊಡುತ್ತಿದ್ದೇವು. ವಿ ಶಾಖ ಮಾರ್ಕೆಟಿಂಗ್ ನಿಂದ ಯಾರು ಉತ್ಪನ್ನಗಳನ್ನು ತೆಗೆದುಕೊಂಡು ಬರುತ್ತಿದ್ದರು ಎಂದು ಅವರ ಹೆಸರು ನನಗೆ ನೆನಪಿಲ್ಲ. ನ್ಯಾಯಾಲಯ ಮುಂದೆ ಇರುವ ಆರೋಪಿಯನ್ನು ನಾನು ನೋಡಿಲ್ಲ. ಆದರೆ ಆ ರೀತಿ ಬರುತ್ತಿದ್ದವರು ನಮ್ಮ ಬಳಿ ಪಡೆದುಕೊಂಡ ಹಣವನ್ನು ವಿಶಾಖ ಮಾರ್ಕೆಟಿಂಗ್ ಗೆ ಮುಟ್ಟಿಸಬೇಕಾಗಿತ್ತು. ಆದರೆ ಅವರು ಹಣವನ್ನು ಮುಟ್ಟಿಸಿಲ್ಲ ಅಂತ ನನಗೆ ತಿಳಿಯಿತು. ಈ ಸಂಬಂಧವಾಗಿ ಪೊಲೀಸರು ನನ್ನನ್ನು ಕರೆದಿದ್ದರು. ಆಗ ಯಾರೋ ಒಬ್ಬ ವ್ಯಕ್ತಿಠಾಣೆಯಲ್ಲಿ ಇದ್ದನು ಆತನನ್ನು ನನಗೆ ತೋರಿಸಿದರು. ಆತ ನನ್ನ ಹತ್ತಿರ ಉತ್ಪನ್ನಗಳನ್ನು ಕೊಟ್ಟು ಹಣ ತೆಗೆದುಕೊಂಡು ಹೋಗಿರುವುದು ನಿಜ ಎಂದು ಹೇಳಿರುತ್ತೇನೆ ಮತ್ತು ಆತನನ್ನು ನೋಡಿ ಗುರುತಿಸಿರುತ್ತೇನೆ. ಆದರೆ ಬಹಳ ದಿನಗಳಾಗಿದ್ದರಿಂದ ನನಗೆ ಈಗ ಆತನನ್ನು ಗುರುತಿಸಲು ಆಗುವುದಿಲ್ಲ. ಈ ವಿಚಾರವನ್ನು ನಾನು ಪೊಲೀಸರಿಗೆ ಹೇಳಿರುತ್ತೇನೆ.

(ಈ ಹಂತದಲ್ಲಿ ಹಿ.ಸ.ಸ.ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಪರಿಶೀಲಿಸಿ ಅನುಮತಿ ನೀಡಲಾಯಿತು.)

**ಪಾಟೀ ಸವಾಲು : ಹಿ. ಸ. ಸ ಅಭಿಯೋಜಕರವರಿಂದ :**

ಆ ರೀತಿ ನಮ್ಮ ಅಂಗಡಿಗೆ ಉತ್ಪನ್ನ ಕೊಟ್ಟು ಹಣ ಒಯ್ಯುತ್ತಿದ್ದ ವ್ಯಕ್ತಿ ಚಂದ್ರಶೇಖರ್ ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿ ಎಂದರೆ ಸರಿ. ಸಾಕ್ಷಿ ಮುಂದುವರೆದು ಆತ ಈಗ ಗಡ್ಡ ಬಿಟ್ಟಿರುವುದರಿಂದ ಈ ಮೊದಲು ಗುರುತಿಸಲು ಆಗಲಿಲ್ಲ ಅಂತ ನುಡಿಯುತ್ತಾರೆ.

**ಪಾಟೀ ಸವಾಲು : ಆರೋಪಿ ಪರ ವಕೀಲರು ಗೈರು ಹಾಜರಿದ್ದು ಆರೋಪಿಗೆ ಪಾಟೀಸವಾಲು ಮಾಡಲು ಅನುಮತಿ ನೀಡಲಾಯಿತು.**

ಉತ್ಪನ್ನ ಗಳನ್ನು ಡೆವಲರಿ ಬಾಯ್ಸ್ ತಂದು ಕೊಡುತ್ತಿದ್ದರು ಎಂದರೆ ಸರಿ. ಆರೋಪಿ ಕೇವಲ ಅರ್ಡರ್ ತೆಗೆದುಕೊಳ್ಳಲು ಬರುತ್ತಿದ್ದ ಎಂದರೆ ಸರಿ. ಸಾಕ್ಷಿ ಮುಂದುವರೆದು ಪೇಮೆಂಟ್ ಕಲೆಕ್ಷನ್ ಗೂ ಸಹ ನೀವು ಬರುತ್ತಿದ್ದೀರಿ ಎಂದು ನುಡಿಯುತ್ತಾರೆ. ಬಿಲ್ಲನ್ನು ತೆಗೆದುಕೊಂಡು ಪೇಮೆಂಟ್ ಮಾಡುತ್ತಿದ್ದೇವು. ನಮ್ಮ ಅಂಗಡಿಯಿಂದ ಒಂದು ವಾರಕ್ಕೆ ರೂ.1,500/- ಪೇಮೆಂಟ್ ಮಾಡುತ್ತಿದ್ದೇವು ಮತ್ತು ಅಷ್ಟೇ ಉತ್ಪನ್ನಗಳನ್ನು ನಾನು ಖರೀದಿ ಮಾಡುತ್ತಿದ್ದೇವು. ಆರೋಪಿ ನನ್ನಿಂದ ಪಡೆದುಕೊಂಡ ಹಣವನ್ನು ವಿಶಾಖ ಮಾರ್ಕೆಟಿಂಗ್ ಗೆ ತುಂಬಿರುತ್ತಾರೆ ಎಂದರೆ ಸಾಕ್ಷಿ ಅದು ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ನನಗೆ ಯಾವುದೇ ವಿಷಯ ಗೊತ್ತಿಲ್ಲದಿದ್ದರೂ ಸಹ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಬಿಲ್ಲುಗಳನ್ನು ಪೊಲೀಸರಿಗೆ ಕೊಟ್ಟಿಲ್ಲ.

2. ಆರೋಪಿಗೆ ಒಟ್ಟು ಎಷ್ಟು ಪೇಮೆಂಟ್ ಮಾಡಿದ್ದೇನೆ ಎಂದು ನನಗೆ ಈಗ ಹೇಳಲು ಆಗುವುದಿಲ್ಲ. ಸದರಿ ಬಿಲ್ಲುಗಳನ್ನು ಕಾಯಿದು ಇಟ್ಟಿರುವುದಿಲ್ಲ. ಬಿಲ್ಲುಗಳು ಇಲ್ಲದೇ ಇರುವುದರಿಂದ ಆರೋಪಿಗೆ ಎಷ್ಟು ಪೇಮೆಂಟ್ ಮಾಡಿರುತ್ತೇನೆ ಎಂದು ಹೇಳಲು ಬರುವುದಿಲ್ಲ ಎಂದರೆ ಸರಿ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯ್ತು)

**ಓ.ಹೇ.ಕೇ.ಸ.ಇದೆ**

**3 ನೇ ಎ.ಸಿ.ಎಮ್.ಎಮ್.ನ್ಯಾ.**

**ಬೆಂಗಳೂರು.**

ಚಾಸಾ- 7 ಪ್ರಾಸಾ-4